ಶ್ರೀ ವೀರೇಂದ್ರ ಪಾಟೀಲ್.—(*Contd.*)

ಸಲುವಾಗಿ ಡಿವಿಜನಲ್ ಕಮೀಷನರ ಹತ್ತಿರ ಕಳುಹಿಸಿದಾಗ ಬಹಳ high rates ಇದೆ ಎಂದು ಹೇಳಿದ್ದಕ್ಕೆ ಪುನಃ ಪರಿಶೀಲಿಸಬೇಕಾಗಿದೆ.

ಶ್ರೀ ಕೆ. ಲಕ್ಕಪ್ಪ.—ಇದು ಬಹಳ, ಅತಿ ಮುಖ್ಯರಸ್ತೆಯಾಗಿರುವುದರಿಂದ ಸಂಚಾರಕ್ಕೆ ಬಹಳ ಅಡ್ಡಿಬರುತ್ತದೆ. ಆದ್ದರಿಂದ ಬಹಳ ಜಾಗ್ರತೆ ತೆಗೆದುಕೊಳ್ಳಬೇಕೆಂಬುದು ಸರ್ಕಾರದವರ ಪರ್ಯಾಲೋಚನೆಯಲ್ಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನಮಗೆ ಬಂದ ಪ್ರಶ್ನೆ ಇದು ಡಿ. ಎಲ್. ಬಿ. ರಸ್ತೆ ಆದಾಗ ತಗೆದುಕೊಂಡದ್ದು. ಆಗ ಕೆಲವು bits ಹಾಗೆಯೇ ಉಳಿಸಿದ್ದರು. ಈಗ ಆ bits ಪೂರ್ಣಮೂಡಬೇಕಾದರೆ ವೆಟ್‌ಲ್ಯಾಂಡ್ ಆಕ್ವೈರ್ ಮೂಡಬೇಕು. ಕಾಂಪೆನ್‌ಸೇಷನ್ ಕೊಡಬೇಕು. ಕಾಂಪೆನ್‌ಸೇಷನ್ ಬಹಳಷ್ಟುಆಗುತ್ತದೆ. ಕಾಂಪೆನ್‌ಸೇರ್ಷ ಕೊಟ್ಟು ಆ ಭೂಮಿಯನ್ನು ತಾಲ್ಲೂಕುಬೋರ್ಡಿನವರ ವಶಕ್ಕೆ ಕೊಟ್ಟಾಗ ತಾವು ಮೂಡಿಸಬೇಕೆಂದು ಹೇಳಿದ್ದೇವೆ. ತಾಲ್ಲೂಕುಬೋರ್ಡಿನವರು ದುಡ್ಡುಕೊಟ್ಟು, ಆ ಭೂಮಿಯನ್ನು ಕೊಟ್ಟ ತಕ್ಷಣ ಈ ಕೆಲಸ ಮೂಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಕಾಂಪೆನ್‌ಸೇರ್ಷ ಎಷ್ಟಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ರೂ. 90,000 ಆಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಈ ರಸ್ತೆಯನ್ನು 1948-49ರಲ್ಲಿ ತೆಗೆದು ಕೊಂಡಿದ್ದೇವೆ ಎಂದು ಹೇಳಿದ್ದೀರಿ. ಈ ರಸ್ತೆ ತೆಗೆದುಕೊಳ್ಳಬೇಕೆಂದು ಸರ್ಕಾರ ಯೋಚನೆ ಮಾಡಿತೋ ಆಗ ಅಕ್ವಿಸಿಷನ್ ಮೂಡಬೇಕಾಗುತ್ತದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿರಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಈ ರಸ್ತೆ ತೆಗೆದು ಕೊಂಡಿದ್ದು 1958ರಲ್ಲಿ. ರಸ್ತೆತೆಗೆದುಕೊಂಡಾಗ ಕೆಲವು ಬಿಟ್ಸ್ ಹಾಗೆಯೇ ಉಳಿದಿತ್ತು. ಉಳಿದದ್ದನ್ನು ಪೂರೈಸಲು ಅಕ್ವಿಸಿಷನ್ ಪ್ರೊಸೀಡಿಂಗ್ಸ್ ತೆಗೆದು ಕೊಂಡು ಭೂಮಿ ನಮ್ಮ ವಶಕ್ಕೆ ಬಂದ ಮೇಲೆ missing link complete ಮೂಡತಕ್ಕ ಪ್ರಶ್ನೆ ಬರುತ್ತದೆ. ಅದರ ಸಲುವಾಗಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ವಿ. ರೇವಣ್ಣ ಸಿದ್ದಪ್ಪ.—90 ಸಾವಿರ ರೂಪಾಯಿ ಕಾಂಪೆನ್‌ಸೇರ್ಷ. ತಾಲ್ಲೂಕು ಬೋರ್ಡಿನವರು ಕೊಡಲಿಲ್ಲ. ತಾವು ಈ ರಸ್ತೆ ತೆಗೆದುಕೊಳ್ಳಲಿಲ್ಲ. ಈ ರೀತಿ ಉದ್ದೇಶ ಪೂರ್ವಕವಾಗಿ ನಿಂತಿದೆ ಎಂದು ಅರ್ಥವಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಹಾಗಲ್ಲ, ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಕಾಂಪೆನ್‌ಸೇಷನ್ ಬಹಳ ಹೆಚ್ಚಾಗುತ್ತದೆ ಎನ್ನುವಂಥದು ಅವರು ಹೇಳಿದ್ದಾರೆ ಮತ್ತು ಪ್ರಪೋಸಲ್ಸ್ build up ಮೂಡಿ ಅವರ ಉತ್ತರಕ್ಕೆ ಕಳುಹಿಸಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಕಾಂಪೆನ್‌ಸೇರ್ಷ ಜಾಸ್ತಿ ಕೊಡಬೇಕಾಗುತ್ತದೆ ಎಂದು ಅತಿ ಮುಖ್ಯವಾದ ರಸ್ತೆಕೆಲಸ ಬಿಡಬೇಕೆಂಬುದು ಸರ್ಕಾರದ ನೀತಿಯೆ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯಸದಸ್ಯರಿಗೆ ಈಗಾಗಲೇ ಹೇಳಿದೆ. ಇದರಲ್ಲಿ ಕಾಂಪೆನ್‌ಸೇಷನ್ ಕೊಡವಂತಹ ಪ್ರಶ್ನೆ ಇದೆ. ಅತಿ ಮುಖ್ಯವಾದ ರಸ್ತೆ ಇದ್ದರೆ ಯಾವ ಭೂಮಿಯಲ್ಲಿ ರಸ್ತೆ ಹೋಗುತ್ತದೆಯೋ ಆ ಭೂಮಿಯ ಮೂಲೀಕರು ದೊಡ್ಡ ಮನಸ್ಸು ಮಾಡಿ ಕಾಂಪೆನ್‌ಸೇರ್ಷ claim ಮಾಡದೇ ಆ ಭೂಮಿಯನ್ನು ಬಿಟ್ಟು ಕೊಟ್ಟರೆ ಆದಷ್ಟು ತೀವ್ರವಾಗಿ ರಸ್ತೆ ಮೂಡಬಹುದು ಎಂದು ಆಶ್ವಾಸನ ಕೊಡಬಲ್ಲೆ.

Villages brought under the purview of Inam Abolition Act in Sorab Taluk.

*Q.— Sri V. S. LAKSHMIKANTHAPPA (Sagar).—

Will the Government be pleased to state :—

(*a*) the number of villages brought under the purview of inam Abolition Act in Sorab Taluk;

(*b*) the number of inam cases pending villagewise in Sorab Taluk and since when ;

(*c*) the total amount of compensation paid to the inamdars of each such village so far?

A.—Sri M. V. KRISHNAPPA (Minister for Revenue).—

(*a*) 5.

(*b*) *Mugur*	*Kuppagadde*	*Kathuvalli*	*Hosur*	*Andavalli*
Nil	21	24 with Spl. D. C.		
	20-7-1962	14-11-1962	239	....
		243 with Spl. Tahsildar		
		10-10-1961		
(*c*) Rs. 2,005	....	....	...	Rs. 1887 Tasdik

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ಇನಾಂತಿ ರದ್ದಿಯಾದ ನಂತರ ಆಯಾಯ ಗ್ರಾಮಗಳಲ್ಲಿ ಎಷ್ಟು ಜನ ರೈತರು ಭೂಮಾಲೀಕತ್ವವನ್ನು ಪಡೆದಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಕೇಳಿರುವ ತಾಲ್ಲೂಕಿನಲ್ಲಿ 4 ಗ್ರಾಮಗಳು ಇವೆ. ಅದರಲ್ಲಿ ಮೂಗೂರಿನಲ್ಲಿ 145 ಜನರ ರೆಕಾರ್ಡ್ ರೆಡಿ ಆಗಿ ಪಾಸು ಆಗಿದೆ. ಕುಪ್ಪಗುಡ್ಡೆಯಲ್ಲಿ 371 ರೆಕಾರ್ಡ್ ರೆಡಿಯಾಗಿ ಪಾಸು ಆಗಿದೆ. ಕಾತುವಳ್ಳಿಯಲ್ಲಿ 267 ರೆಕಾರ್ಡ್ ರೆಡಿಯಾಗಿ ಪಾಸು ಆಗಿವೆ. ಹೊಸೂರಿನಲ್ಲಿ 239 ಆಪ್ಲಿಕೇಷನ್‌ಗಳು ಆಖೈರಾಗಿ ಫೈಸಲಾಗಿವೆ. ಅಂದಪಳ್ಳಿಯಲ್ಲಿ 137 Occupancy records build up ಆಗಿದೆ.

ಶ್ರೀ ವಿ.ಎಸ್. ಲಕ್ಷ್ಮೀಕಾಂತಪ್ಪ.—ಇನಾಂದಾರರಿಗೆ ಕುಪ್ಪಗುಡ್ಡೆ ಮತ್ತು ಇನ್ನೆರಡು ಗ್ರಾಮಗಳಲ್ಲಿ ಪರಿಹಾರ ಕೊಟ್ಟಿಲ್ಲ ಎಂದು ತಿಳಿಸಿದ್ದೀರಿ. ಯಾವ ಕಾರಣದಿಂದ ಕೊಟ್ಟಿಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಹಳ್ಳಿಗಳಲ್ಲಿ ಕಾಂಪೆಸೇಷನ್ ಯಾರೂ ಕೇಳಲಿಲ್ಲ. ಕೆಲವು ಹಳ್ಳಿಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಆಗಿಲ್ಲ. ಆದ್ದರಿಂದ ಹಾಗೆ ಆಗಿದೆ. They have to establish the right over the land. ಆ ರೆಕಾರ್ಡ್ ಪ್ರೊಡ್ಯೂಸ್ ಮಾಡಿಲ್ಲ. ಪ್ರೊಡ್ಯೂಸ್ ಮಾಡಿದ ಮೇಲೆ ಕೊಡುತ್ತಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಕೆಲವರಿಗೆ ಪರಿಹಾರ ಕೊಡುವುದು ತಡವಾಗಿರುವುದರಿಂದ ಅವರು ಕೋರ್ಟುಗಳಿಗೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರ ತಡಮಾಡಲು ಕಾರಣವಿಲ್ಲ. ಬೇಕಾದ ರಿಕಾರ್ಡನ್ನು ಪ್ರೊಡ್ಯೂಸ್ ಮಾಡಿ ಟೈಟಲ್ ಡೀಡ್ ತೋರಿಸಿದ ತಕ್ಷಣ ಸರ್ಕಾರ ಪರಿಹಾರ ಕೊಡುತ್ತದೆ. ಅನೇಕರು ಇನ್ನೂ ಆಧಾರ ಒದಗಿಸದೆ ತಮಗೆ ಪರಿಹಾರ ಬರಬೇಕಾಗಿದೆ ಎಂದು ಕೇಳುತ್ತಾರೆ.

ಶ್ರೀ ಜಿ. ವೆಂಕಟೇಗೌಡ.—ಅಂಥ ಸಂದರ್ಭಗಳಲ್ಲಿ ಕೊಡಬೇಕಾದ ಪರಿಹಾರವನ್ನು ಕೋರ್ಟಿನಲ್ಲಿ ಡಿಪಾಜಿಟ್ ಮಾಡಲು ಸಾಧ್ಯವಿಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾರಿಗೆ ಕೊಡಬೇಕೆಂದು ಡಿಪಾಜಿಟ್ ಮಾಡುವುದು? ನಮ್ಮ ಹತ್ತಿರ ಹಣವಿದ್ದರೇನು? ಕೋರ್ಟಿನಲ್ಲಿದ್ದರೇನು?

ಶ್ರೀ ಜಿ. ವೆಂಕಟೇಗೌಡ.—ಸರಕಾರ ಕೊಡಲಿಲ್ಲವೆಂದು ರೈತ ಕೋರ್ಟಿಗೆ ಹೋಗುವುದನ್ನು ತಪ್ಪಿಸಲು ಕೋರ್ಟಿನಲ್ಲಿ ಡಿಪಾಜಿಟ್ ಮಾಡುವುದು ಸರಿಯಾದ ಮಾರ್ಗವಲ್ಲವೆ?

ಶ್ರೀ ಎನ್. ನಂಜೇಗೌಡ.—ರೀಸರ್ವೆ ಮಾಡಿದಾಗ ಅದರ ಛಾರ್ಜು ಕೊಡಬೇಕಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ಫೋಡಿಛಾರ್ಜು ಮುಂತಾದ್ದನ್ನು ರೈತರಿಂದ ವಸೂಲು ಮಾಡುತ್ತಾರೆ.

Repair to the Bund near the Sluice of Tumkur Tank.

*Q.—113. Sri T. S. SIVANNA (Madhugiri).—

Will the Government be pleased to state:—

(*a*) when the bund near the sluice of Tumkur Tank was repaired;

(*b*) the amount spent to repair this bund;

(*c*) whether it has come to the notice of the Government that the bund which was repaired, again damaged on 3-9-1962 at the same place, thus causing great alarm;

(*d*) the steps they have taken so far against the concerned departmental officials who are responsible for the same?

A.—Sri ALUR HANUMANTHAPPA (Deputy Minister for Minor Irrigation).—

(*a*) During April 1961.

(*b*) Rs. 5,215.

(*c*) No; leak developed on 3-9-1962 is at a place different from the portion of the bund that was repaired previously.

(*d*) Does not arise in view of reply to clause (*c*) of the question.

ಶ್ರೀ ಟಿ. ಎಸ್. ಶಿವಣ್ಣ.—ಈ ಸಾರಿ ರಿಪೇರಿ ಮಾಡಿರುವ ಸ್ಥಳಕ್ಕೂ ಮತ್ತು ಹೋದ ಸಾರಿ ರಿಪೇರಿ ಮಾಡಿರುವ ಸ್ಥಳಕ್ಕೂ ಎಷ್ಟು ದೂರವಾಗುತ್ತದೆ?

† ಶ್ರೀ ಆಲೂರು ಹನುಮಂತಪ್ಪ.—1961 ರಲ್ಲಿ ಎರಡನೆಯ ಗ್ರೇಡಿನಲ್ಲಿ ದುರಸ್ತು ಮಾಡಲಾಗಿತ್ತು. ಆದಾದಮೇಲೆ ಪುನಃ ದುರಸ್ತು ಮಾಡಿರುವುದು ಮೂರನೆಯ ಗ್ರೇಡಿನಲ್ಲಿ.

ಶ್ರೀ ಟಿ. ಎಸ್. ಶಿವಣ್ಣ.—ಒಂದು ಗ್ರೇಡಿನಿಂದ ಇನ್ನೊಂದು ಗ್ರೇಡಿನವರೆಗೆ ಆಗುವ ದೂರವೆಷ್ಟು?

ಶ್ರೀ ಆಲೂರು ಹನುಮಂತಪ್ಪ.—99 ಅಡಿಗಳು.

ಶ್ರೀ ಟಿ. ಮಾದಯ್ಯಗೌಡ.—ಹಿಂದೆ ದುರಸ್ತು ಮಾಡಿದ್ದ ಸ್ಥಳದಲ್ಲೇ ಅಪಾಯವಾಗಿದೆಯೆಂದು ಪ್ರಶ್ನೆಯಲ್ಲಿ ಹೇಳಿದ್ದಾರೆ. ಅದಕ್ಕೆ ಹತ್ತಿರದಲ್ಲೇ ಆಗಿತ್ತೇ?

ಶ್ರೀ ಆಲೂರು ಹನುಮಂತಪ್ಪ.—ಎರಡನೆಯ ಸಲ ಲೀಕ್ ಆದುದು ಮೂರನೆಯ ಗ್ರೇಡಿನಲ್ಲಿ, ಮೊದಲನೆಯ ಸಲ ರಿಪೇರಿ ಮಾಡಿದ ಗ್ರೇಡಿನಲ್ಲಲ್ಲ.